

### ರಾಯ ಕಟ್ಟಿದ ಹೊಸಪೇಟೆಯಲ್ಲಿ...

ಜನರ ಸ್ವಾರ್ಥಕ್ಕೆ ನಲುಗಿ ಮಣ್ಣಾಗಿ ಹೋಗಿರುವ ಕೃಷ್ಣದೇವರಾಯನ ಹೆಗ್ಗುರುತುಗಳನ್ನು ಕಣ್ಣಿಗೆ ಕಟ್ಟುವ ಹಾಗೆ ಕಟ್ಟಿಕೊಟ್ಟ ಲೇಖನ, ಮಲ್ಲಿರ್ಜುನ ಹೊಸಪಾಳ್ಯ ಅವರ 'ರಾಯ ಕಟ್ಟಿದ ಹೊಸಪೇಟೆಯಲ್ಲಿ ಕೃಷ್ಣನ ನೆನಪಿನ ಹೆಗ್ಗುರುತುಗಳೆಲ್ಲಿ?' (ಆ. 5). ಕೊನೆಪಕ್ಷ ಅವರ ಪ್ರತಿಮೆಯನ್ನು ಜೋಳದರಾಶಿ ಗುಡ್ಡದ ಮೇಲೆ ವಿರಾಜಮಾನವಾಗಿ ರಾರಾಜಿಸುವಂತೆ ಮಾಡುವುದು ಯಾರ ಕರ್ತವ್ಯವೋ ಗೊತ್ತಿಲ್ಲ!

—ಬೆಂ. ಮು. ಮಾರುತಿ, ಬೆಂಗಳೂರು

ಚಿತ್ರಪಟ ಕಥನ ಅತ್ಯಂತ ಆಕರ್ಷಕವಾದ ಚಿತ್ರಗಳೊಂದಿಗೆ ಸೊಗಸಾಗಿ ಮೂಡಿಬಂದಿದೆ. ಅಂದು ಹೊಸಪಟ್ಟಣವಾಗಿದ್ದ ಈಗಿನ ಹೊಸಪೇಟೆಯಲ್ಲಿ ಬಹುಕಾಲ ವಿರಮಿಸಿದ್ದ ಕೃಷ್ಣದೇವರಾಯರ ಹೆಗ್ಗುರುತುಗಳೆಲ್ಲಾ ಹೇಳ ಹೆಸರಿಲ್ಲದಂತೆ ಮಾಯವಾಗಿರುವ ವಿಷಾದನೀಯ ನೋವಿನ ಛಾಯೆ ಇಡೀ ಲೇಖನದುದ್ದಕ್ಕೂ ಹರಡಿ ಮನಕಲಕುವಂತಿದೆ.

—ಜಿ.ಕೆ.ಕಂಚೀವರದಯ್ಯ, ಕೊಳಪಾಳ

ಲೇಖನ ಓದಿ ಕಣ್ಣುಗಳಲ್ಲಿ ನೀರು ಪಸರಿಸಿತು. ಕೃಷ್ಣದೇವರಾಯ ಕಟ್ಟಿಸಿ ಸುಂದರಗೊಳಿಸಿದ ಆ ಪಟ್ಟಣವೆಲ್ಲಿ? ನಾನು ಹಲವು ಬಾರಿ ಹಂಪಿಯನ್ನು ನೋಡಿದ್ದೇನಾದರೂ ಇಷ್ಟೊಂದು ಮಾಹಿತಿಯನ್ನು, ಇತಿಹಾಸವನ್ನು ತಿಳಿದಿರಲಿಲ್ಲ. ಕನ್ನಡದಲ್ಲಿ ಒಂದು ಮಾತಿದೆ 'ತಿಪ್ಪೆ ಉಪ್ಪರಿಗೆ ಆಯಿತು; ಉಪ್ಪರಿಗೆ ತಿಪ್ಪೆ ಆಯಿತು'. ಇದರಂತೆಯೇ ನಮ್ಮ ಹಂಪಿ ಪಟ್ಟಣವನ್ನು ನಾವೇ ಹಾಳು ಮಾಡಿಕೊಂಡಿದ್ದೇವೆ.

—ಸೇತುರಾವ್ ಕುಲಕರ್ಣಿ, ಬೆಂಗಳೂರು

ಇಂದಿನ ಹಾಳು ಹಂಪೆಯ ಅಂದಿನ ರಾಯ ಕೃಷ್ಣನ ನೆನಪುಗಳು ಈ ರೋಗರುಜಿನಗಳ ಸಮಯದಲ್ಲಿ ನೆನಪಾಗುವುದು ಸಹಜವೆ! 'ನಿಮ್ಮೊಡನೆ'ಯಲ್ಲಿ 'ಸಂಯಮದ ಪಾಠ ಹೇಳಿಸಿಕೊಳ್ಳುವ ಕಾಲಘಟ್ಟದಲ್ಲಿ...' ಓದಿಸಿಕೊಂಡಂತೆ ಕೊನೆಯ ಸಾಲುಗಳು ಹಿತವಾಗಲಿಲ್ಲ. ಮಠ, ಮಂದಿರಗಳಲ್ಲಿ ಆಧ್ಯಾತ್ಮಿಕ ಚಿಂತನೆಯಲ್ಲಿರುವವರನ್ನೂ ಬಿಡದೆ ತಮ್ಮ ವಿಕೃತಿಯಲ್ಲಿ ಎಳೆದು ತಂದು, ಅವರ ಹೆಸರಿಗೆ ಇಷ್ಟುವರ್ಷ ಇಲ್ಲದ ಕಳಂಕವನ್ನು ಈಗ ಹಚ್ಚುವ ಕೆಲಸವನ್ನು ಮಾಡಿರುವ ಭಂಡರ ಕುರಿತು ನಮಗೆ ಗಮನವಿರಬೇಕಷ್ಟೇ.

—ರೇವತಿ, ಪಿರಿಯಾಪಟ್ಟಣ

### ನಾಟಿ ಹುಂಜ

ಜು. 29ರ ಸಂಚಿಕೆಯಲ್ಲಿ ಗುರುಪ್ರಸಾದ್ ಕಂಟಲಗೆರೆ ಬರೆದಿರುವ, 'ನಾಟಿ ಹುಂಜ' ಕಥೆ, ನಮ್ಮ ಹಳ್ಳಿಮನೆ, ಪರಿಸರ ಮತ್ತು ಹಳ್ಳಿಯ ಜೀವನವನ್ನು ನೆನಪಿಸಿತು. ಕಥೆಯನ್ನು ಓದುತ್ತಿದ್ದರೆ ವಿವರಣೆಯ ಚಿತ್ರಗಳು ಕಣ್ಣ ಪರದೆಯಲ್ಲಿ ಸಾಗುತ್ತಿತ್ತು. ಕಥೆಯಲ್ಲಿ ಎಲ್ಲಾ ಪಾತ್ರಗಳನ್ನು ಅತ್ಯುತ್ತಮವಾಗಿ ಪರಿಚಯ ಮಾಡಿಕೊಟ್ಟಿದ್ದಾರೆ.

—ರವಿಪ್ರಕಾಶ

### ಹಾರುತ ದೂರ ದೂರ

ಆ. 5ರ ಸಂಚಿಕೆಯಲ್ಲಿ ಡಾ. ಬಿ.ಆರ್. ಗುರುಪ್ರಸಾದ್ ಬರೆದಿರುವ 'ಹಾರುತ ದೂರ ದೂರ' ಲೇಖನ ತುಂಬಾ ಉಪಯುಕ್ತ ಮಾಹಿತಿಗಳಿಂದ ಕೂಡಿದೆ. ಇದುವರೆಗೆ ಭೂಮಿಯ ಮೇಲಿನ ಪ್ರವಾಸಿ ಕೇಂದ್ರಗಳಿಗೆ ಮಾನವ ಭೇಟಿ ನೀಡುತ್ತಿದ್ದ. ಈಗ ಬಾಹ್ಯಾಕಾಶಕ್ಕೂ ಭೇಟಿ ನೀಡುವಲ್ಲಿ ಉತ್ಸಾಹ ತೋರುತ್ತಿದ್ದು, ವಿವಿಧ ರಾಷ್ಟ್ರಗಳ ಬಾಹ್ಯಾಕಾಶ ಕೇಂದ್ರಗಳು ಹಾಗೂ ಅಲ್ಲಿನ ಸರ್ಕಾರಗಳು ಬಾಹ್ಯಾಕಾಶ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡುತ್ತಿರುವುದು ನಿಜಕ್ಕೂ ಉತ್ತಮ ಬೆಳವಣಿಗೆ.

—ಎಚ್. ಆರ್. ವಸ್ತ್ರದ, ಧಾರವಾಡ

### ಲೋನ್ ಬೇಕಾ!

ಆ. 5ರ ಸಂಚಿಕೆಯಲ್ಲಿ ಶಶಿಕುಮಾರ್ ಸಿ. ಅವರು ಬರೆದಿರುವ 'ಜಿಯೊ: ಡಾಟಾ ಲೋನ್ ಬೇಕಾ..?' ಮಾಹಿತಿ ಓದಿ ಖುಷಿ ಆಯ್ತು. ಮೊಬೈಲ್ ಬಳಕೆ ಹೆಚ್ಚಾದಂತೆ ಮೊಬೈಲ್ ಡಾಟಾ ಇದ್ದಕ್ಕಿದ್ದಂತೆ ಖಾಲಿ ಆದಾಗ ಬೇಸರ ಹಾಗೂ ಆತಂಕಕ್ಕೆ ಒಳಗಾಗುವ ನಮಗೆ 'ರಿಚಾರ್ಜ್ ನೌ... ಪೇ ಲೇಟರ್' ಖಂಡಿತಾ ಉಪಯುಕ್ತ ಮಾಹಿತಿ.

—ರಘುನಾಥರಾವ್ ತಾಪ್ಸೆ, ದಾವಣಗೆರೆ

### ಮರಕೆಸು...

ಜು. 29ರ ಸಂಚಿಕೆಯಲ್ಲಿ ಕೃಷ್ಣಿ ಶಿರೂರ ಅವರು ಬರೆದಿರುವ 'ಮರಕೆಸುವಿನ ಪತ್ರೊಡೆ' ಲೇಖನ ಓದುತ್ತಿದ್ದಂತೆ ಬಾಯಿಯಲ್ಲಿ ನೀರೂರಿತು. ಪತ್ರೊಡೆಯ ಸ್ವಾದ ಅವರ ಬರವಣಿಗೆಯಲ್ಲಿಯೂ ಇದ್ದಿದ್ದು ಖುಷಿ ಕೊಟ್ಟಿತು. ಹಳ್ಳಿ ಬಿಟ್ಟು ಪಟ್ಟಣಕ್ಕೆ ಬಂದ ಮೇಲೆ ರುಚಿಯಾದ ಮರ ಕೆಸುವಿನ ಪತ್ರೊಡೆ ನನಗೆ ತುಂಬಾ ಅಪರೂಪವಾಗಿದೆ. ಪತ್ರೊಡೆಯನ್ನೇ ತಿಂದಷ್ಟು ಖುಷಿಯನ್ನು ಲೇಖನ ಕೊಟ್ಟಿದೆ.

—ಅನಸೂಯ ತ್ರಿವಿಕ್ರಮ್, ಕೇದಿಗೆಮನೆ

### ಸಕಾಲಿನ ಲೇಖನ

'ನಿಮ್ಮೊಡನೆ' (ಜು. 29) ಅಂಕಣದಲ್ಲಿ ರಘುನಾಥ ಚ.ಹ. ಅವರು ಪ್ರಸ್ತುತ ಕನ್ನಡ ಚಿತ್ರರಂಗದ ಸ್ಥಿತಿಗತಿಗಳ ಕುರಿತು ಸರಿಯಾಗಿ ಬೆಳಕು ಚೆಲ್ಲಿದ್ದಾರೆ. ಕಟುವಾದ ಸತ್ಯವನ್ನೇ ಬರೆದಿದ್ದಾರೆ. ಕಲಾವಿದರ ವಿವೇಚನಾಶೀಲ ವರ್ತನೆಗಳು, ಯಾವ ರೀತಿಯಲ್ಲೂ ಪರಿಣಾಮ ಬೀರದ ಕೇವಲ ನಟರ ವೈಭವೀಕರಣ ಮಾತ್ರ ತುಂಬಿರುವ ರಸಹೀನ, ಭಾವಹೀನ ಸಿನಿಮಾಗಳು ನಮ್ಮ ಚಿತ್ರರಂಗಕ್ಕೆ ಕಪ್ಪುಚುಕ್ಕೆಗಳಾಗಿ ಉಳಿಯುತ್ತವೆ.

—ರಮೇಶ್ ರಾವ್, ಕೈಕಂಬ

### ವಿಕಿರಣ ಮತ್ತು ಪ್ರೇಮದ ಗುಲಾಬಿ



ಆ. 5ರ ಸಂಚಿಕೆಯಲ್ಲಿ ಸಿಡ್ಡಿ ಶ್ರೀನಿವಾಸ್ ಬರೆದಿರುವ 'ರೇಡಿಯಂ ವಿಕಿರಣ ಮತ್ತು ಪ್ರೇಮದ ಗುಲಾಬಿ', ಪೋಲೆಂಡಿನ ಶ್ರೇಷ್ಠ ಮಹಿಳಾ ವಿಜ್ಞಾನಿ ಮೇರಿ ಕ್ಯೂರಿ ಕುರಿತು ಕುತೂಹಲಕಾರಿ ವಿಷಯಗಳನ್ನು ತಿಳಿಸಿತು. ಮೇರಿ ಕ್ಯೂರಿ ಪ್ರೀತಿ, ಪ್ರೇಮ, ಪ್ರಣಯದಲ್ಲೂ ಅಷ್ಟೇ ಆಸಕ್ತಿವಹಿಸಿ, ಮೂರು ಪುರುಷರನ್ನು ಪ್ರೇಮಿಸಿ ಕೊನೆಗೆ ಒಬ್ಬ ಪ್ರೇಮಿಯ ಮೊಮ್ಮಗ ಮೇರಿ ಕ್ಯೂರಿ ಮೊಮ್ಮಗಳನ್ನು ಮದುವೆಯಾಗಿದ್ದು ಸಾರ್ಥಕವಾಯಿತೆನ್ನಿಸಿತು!

—ಸೀತಾ ಕೇಶವ, ಸಿಡ್ಡಿ

ಬಾಲ್ಯದಲ್ಲಿ ನಾವು ಮೇಡಂ (ಮೇರಿ) ಕ್ಯೂರಿ ಅವರು ರೇಡಿಯಂ ಅನ್ನುವ ಮೂಲವಸ್ತುವನ್ನು ಸಂಶೋಧಿಸಿದ್ದಾರೆ ಎನ್ನುವ ಬಗ್ಗೆ ಓದಿದ್ದೆವು. ಈ ಲೇಖನ ಅವರ ವೈಯಕ್ತಿಕ ಬದುಕಿನ ವಿವರಗಳನ್ನು ತೋರಿಸಿತು. ಪ್ರಪಂಚದಲ್ಲಿ ಒಂದೇ ಕುಟುಂಬದ ಇಷ್ಟು ಜನ (ಗಂಡ, ಹೆಂಡತಿ, ಮಗಳು, ಅಳಿಯ) ನೊಬೆಲ್ ಪಡೆದ ದಾಖಲೆ ಇಲ್ಲ. ವಿಜ್ಞಾನಕ್ಕೆ ಹೊರತಾಗಿಯೂ ಮನುಷ್ಯನ ಬದುಕಿನಲ್ಲಿ ಭಾವನೆಗಳು ಅದೆಷ್ಟರ ಮಟ್ಟಿಗೆ ಕಾಡುತ್ತವೆ ಎನ್ನುವುದಕ್ಕೆ ಲೇಖನದ ಕೊನೆಯ ಸಾಲುಗಳೇ ಉದಾಹರಣೆ.

—ಮಹಮ್ಮದ್ ಇಕ್ಬಾಲ್, ಹಾಲಾಡಿ

ನೊಬೆಲ್ ಪ್ರಶಸ್ತಿ ವಿಜೇತೆ ಮೇಡಮ್ ಕ್ಯೂರಿ ಅವರ ವೈಯಕ್ತಿಕ ಜೀವನ ಮಾತ್ರವಲ್ಲದೇ ವೈಜ್ಞಾನಿಕ ಸಾಧನೆಗಳನ್ನೂ ವಿವರವಾಗಿ ಪ್ರಸ್ತುತಪಡಿಸಿರುವ ಲೇಖಕರಿಗೆ ಧನ್ಯವಾದಗಳು.

—ಶ್ರೀನಿವಾಸನ್ ಎಸ್.ಕೆ., ಬೆಂಗಳೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in